ಒಟ್ಟು ಎರಡು ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗಿತ್ತು. ಈ ಪೈಕಿ ಒಬ್ಬರು ಗುತ್ತಿಗೆದಾರರು ನಿರ್ವಹಣೆ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನೊಬ್ಬ ಗುತ್ತಿಗೆದಾರರು ಟೆಂಡರು ಕಾಮಗಾರಿಯನ್ನು ಅರ್ಧಕ್ಕೆ ಬಿಟ್ಟಿರುವುದರಿಂದ ಹಾಗೂ ಅಧಿಕ ಭಾರದ ಅದಿರು ಲಾರಿಗಳು: ಅನಿಲ ಟ್ಯಾಂಕರ್ ಇತ್ಯಾದಿಗಳ ಓಡಾಟದಿಂದ ಈ ಭಾಗದ ಹೆದ್ದಾರಿಯು ಅಲ್ಲಲ್ಲಿ ಹಾನಿಗೊಂಡಿರುತ್ತದೆ. ಪ್ರವಾಹ ಹಾನಿ ದುರಸ್ತಿಯಡಿಯಲ್ಲಿ ತುರ್ತು ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಈ. ರಾಷ್ಟ್ರೀಯ ಹೆದ್ದಾರಿ–48ರ ಬೆಂಗಳೂರು– ಮಂಗಳೂರುವರೆಗಿನ ಚತುಷ್ಪಥ ರಸ್ತೆ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ, ಬೆಳ್ಳೂರಿನಿಂದ ಮುಂದಕ್ಕೆ ಕಾಮಗಾರಿ ಪ್ರಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ರಾಷ್ಟ್ರೀಯ ಹೆದ್ದಾರಿ–48ರ ಕಿಮೀ. 28.00 ರಿಂದ ಕಿಮೀ. 328.00ರವರೆಗೆ ಅಂದರೆ ನೆಲಮಂಗಲದಿಂದ–ಮಂಗಳೂರುವರೆಗೆ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ಇದ್ದು, ಮೊದಲ ಹಂತವಾಗಿ ಕಿಮೀ.28.00ರಿಂದ 110.00 ರವರೆಗೆ ಅಂದರೆ ನೆಲಮಂಗಲದಿಂದ ದೇವಿಹಳ್ಳಿವರೆಗೆ ಚತುಷ್ಪಥ ರಸ್ತೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ನವದೆಹಲಿ ಇವರು ಕೈಗೊಂಡಿರುತ್ತಾರೆ. ಕಿಮೀ.110.00 ರಿಂದ 190.00ರವರೆಗೆ ಅಂದರೆ ದೇವಿಹಳ್ಳಿಯಿಂದ ಹಾಸನದವರೆಗೆ ಚತುಷ್ಪಥ ರಸ್ತೆ ನಿರ್ಮಾಣದ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಈಗಾಗಲೇ ಎರಡು ಬಾರಿ ಟೆಂಡರ್ ಕರೆದರೂ ಯಾರು ಭಾಗವಹಿಸದೇ ಇದ್ದುದರಿಂದ, ಅಂದಾಜನ್ನು ಮಾರ್ಪಡಿಸಿ ಟೆಂಡರ್ ಕರೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿರುವುದಾಗಿ ತಿಳಿದುಬಂದಿದೆ. ಕಿ.ಮೀ.190.00ರಿಂದ 328.00ರವರೆಗೆ ಅಂದರೆ ಹಾಸನದಿಂದ ಬಿ.ಸಿ.ರೋಡ್‌ವರೆಗಿನ ಚತುಷ್ಪಥ ರಸ್ತೆ ಕೆಲಸವನ್ನು ಡಿ.ಬಿ.ಎಫ್.ಓ. ಆಧಾರದಲ್ಲಿ ನಿರ್ವಹಿಸಲು ಫೀಸಿಬಿಲಿಟಿ ಸ್ಟೈಡಿ ಮಾಡುವ ಬಗ್ಗೆ ಮೆ:ಪೀಡ್‌ಬ್ಯಾಕ್ ವೆಂಚರ್ಸ್ ಕೆನ್‌ಸಲ್ಟೆಂಟ್, ಬೆಂಗಳೂರು ಇವರಿಗೆ ಟೆಂಡರ್ ಮುಖಾಂತರ ವಹಿಸಿಕೊಡಲಾಗಿದೆ. ಹಾಗೂ ಸದರಿಯವರು ನೀಡಿದ ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ ಹಾಗೂ ವರದಿಗೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ–48ರ ಕಿಮೀ.328.00 ರಿಂದ ಕಿಮೀ.345.00ರವರೆಗೆ ಅಂದರೆ ಬಿ.ಸಿ.ರೋಡಿನಿಂದ–ಮಂಗಳೂರುವರೆಗೆ ಚತುಷ್ಪಥ ರಸ್ತೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೈಗೊಂಡು ಕೆಲಸ ಪ್ರಗತಿಯಲ್ಲಿದೆ.

218 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)
ಮಾನ್ಯ ಲೋಕೋಪಯೋಗಿ ಸಚಿವರು.

ಅ) ಕಾಪುವಿನಲ್ಲಿ ಹಳೆಯ ಇಲಾಖಾ ಪ್ರವಾಸಿ ಮಂದಿರವಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೆ?

ಈ ಪ್ರವಾಸಿ ಮಂದಿರವು ಲೋಕೋಪಯೋಗಿ ಇಲಾಖಾ ವ್ಯಾಪ್ತಿಗೆ ಬರವುದಿಲ್ಲ. ಇದು ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಬರುತ್ತದೆ.

ಆ) ಇದು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು, ಮೇಲ್ದರ್ಜೆಗೇರಿಸುವ ಅಗತ್ಯತೆಯ ಬಗ್ಗೆ ಪ್ರಸ್ತಾವನೆ ಇದೆಯೇ?

ಉದ್ಭವಿಸುವುದಿಲ್ಲ

ಇ) ಇದ್ದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲು ಆದೇಶಸುವುದೆ?

ಉದ್ಭವಿಸುವುದಿಲ್ಲ

ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿಪಡಿಸುವುದು.

217 ಶ್ರೀ. ಲಾಲಾಜಿ ಆರ್. ಮೆಂಡನ್(ಕಾಪು)
ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಕಾಪು ದೀಪಸ್ತಂಭವನ್ನು ಪ್ರವಾಸೋದ್ಯಮ ಹಾಗೂ ಕಡಲತೀರಗಳನ್ನೊಳ ಗೊಂಡಂತೆ ಅಭಿವೃದ್ಧಿಗೆ ಯಾವ ರೀತಿಯ ನಕ್ಷೆಯನ್ನು ಕೈಗತ್ತಿಕೊಂಡಿದೆ;

ಉಡುಪಿ ಕಾಪು ದೀಪಸ್ಥಂಬದ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳಾದ ಲಿಂಕ್ ರಸ್ತೆ, ರೈಲಿಂಗ್ಸ್ ಅಳವಡಿಕೆ, ಲೈಟ್ ಹೌಸ್ ಎದುರಿನ ಗುಡ್ಡದಲ್ಲಿ ಆಸನ ವ್ಯವಸ್ಥೆ, ಹಾಗೂ ತೂಗುಸೇತುವೆ ಅಳವಡಿಕೆ, ಶೌಚಾಲಯ ನಿರ್ಮಾಣ, ಪಾರ್ಕಿಂಗ್ ವ್ಯವಸ್ಥೆ, ದೀಪದ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿದೆ.

ಆ) ಈ ನಕ್ಷೆಯಿಂತೆ ಕಾರ್ಯಗತ ಮಾಡಲು ತೆಗೆದಿರಿಸಿರುವ ಅನುದಾನವೆಷ್ಟು,

ಉಡುಪಿ ಜಿಲ್ಲೆಯ ಕಾಪು ಬೀಚ್ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು 2007–08ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ರವರಿಗೆ ರೂ.55.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಸಾಲಿನಲ್ಲಿ ಕಾಮಗಾರಿ ನಡೆಸಲು ಬಿಡುಗಡೆಯಾದ ಅನುದಾನವೆಷ್ಟು?

ಪ್ರಸ್ತುತ 2008–09ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

153 ಶ್ರೀ. ಎಂ.ಟಿ.ಕೃಷ್ಣಪ್ಪ (ತುರುವೇಕೆರೆ)
ಮಾನ್ಯ ಲೋಕೋಪಯೋಗಿ ಸಚಿವರು